# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 645/2023

**ಸಾಕ್ಷಿಯನ್ನು ದಿಃ 13.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಶಿವಕುಮಾರ್ | ಸಿಡಬ್ಲ್ಯೂಃ 15 | ಪಿಡಬ್ಲ್ಯೂಃ 7 |
| ತಂದೆಯ ಹೆಸರು | ಶಿವರಾಜು | | |
| ವಯಸ್ಸು | 35 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಕಲ್ಲುಣಿಕೆ ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಸಾಕ್ಷಿ ವಾಹನ ಅಮಾನತ್ತು ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ–11 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 08.09.2023 ರಂದು ಹುಣಸೂರು ಪಟ್ಟಣ ಠಾಣೆಯಲ್ಲಿ ಮಾಡಿದ್ದೇನೆ. ಸದರಿ ಸಹಿಯನ್ನು ಅಪಘಾತಕ್ಕೆ ಸಂಬಂಧಿಸಿದಂತೆ ಕಾರು ಮತ್ತು ಬೈಕನ್ನು ಅಮಾನತ್ತುಪಡಿಸಿಕೊಳ್ಳುವಾಗ ಮಾಡಿದ ಮಹಜರು ಸಮಯದಲ್ಲಿ ಹಾಕಿದ್ದೇನೆ. ನನ್ನಜೊತೆ ಚಾಸಾ–14 ರವರು ನಿಪಿ–11 ಕ್ಕೆ ಸಹಿ ಹಾಕಿದ್ದಾರೆ. ಮಹಜರು ಸಮಯದಲ್ಲಿ KA–09–MA–7212ರ ಕಾರು ಮತ್ತು KA–45–EC–6673ರ ಬೈಕನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಬೈಕ್ ನ ಮುಂಭಾಗ, ಹ್ಯಾಂಡಲ್, ಕನ್ನಡಿ, ಹೆಡ್ ಲೈಟ್ ಜಖಂಗೊಂಡಿತ್ತು. ಕಾರಿನ ಬಂಪರ್, ಹೆಡ್ ಲೈಟ್ ಜಖಂಗೊಂಡಿತ್ತು. ಸದರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ–2ರಿಂದ 7ರ ಬಾವಚಿತ್ರಗಳಲ್ಲಿ ಸದರಿ ವಾಹನಗಳನ್ನು ಗುರುತಿಸುತ್ತಾರೆ. ನಿಪಿ–11ರ ಮಹಜರನ್ನು ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಮಾಡಲಾಗಿದೆ. ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡು ಸಹಿ ಹಾಕಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಕು. ASM ವಕೀಲರಿಂದಃ**

ದಿಃ 08.09.2023 ರಂದು ಮಹಜರಿಗೆ ಸಹಿ ಹಾಕಿದ್ದೇನೆ. ಮಹಜರಿಗೆ ಸಹಿ ಹಾಕಲು ಬರುವಂತೆ ಪೋಲೀಸರು ನನ್ನನ್ನು ಕರೆದರು. ನನಗೆ ಅಪಘಾತದ ಬಗ್ಗೆ ಗೊತ್ತಿಲ್ಲದೇ ಇದ್ದರೂ ಪೋಲಿಸರ ಕೋರಿಕೆಯ ಮೇರೆಗೆ ಮಹಜರಿಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿದ್ದೇನೆ. ಅಪಘಾತ ಕೋರ್ಟ್ ಮುಂಭಾಗ ಆಗಿದೆ. ನಾನು ಮಹಜರಿಗೆ ಹಾಜರಾಗಿಲ್ಲ ಮತ್ತು ಪೋಲಿಸರ ಕೋರಿಕೆಯ ಮೇರೆಗೆ ಮಹಜರಿಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಮತ್ತು ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು